KAHS610046022013

Presented on : 20-12-2013
Registered on : 20-12-2013
Decided on : 29-01-2022
Duration : 8 years, 1 months, 9 days

**IN THE COURT OF ADDL CIVIL JUDGE AND JMFC AT**
**Channarayapatna,HASSAN**
**Presided Over by LAKSHMI.M.V**

# O.S./784/2013

**ತೀರ್ಪಿನ ದಿನಾಂಕಃ 29 ನೇ** ಜನವರಿ **2022**

**ವಾದಿಯರುಃ**

1. ರಂಗಮ್ಮ ಕೋಂ ಬೊಮ್ಮೇಗೌಡ
ಸುಮಾರು 50 ವರ್ಷ ವಯಸ್ಸು,
ಗೌಡಗೆರೆ ಗ್ರಾಮ,
ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

2. ಜಯಮ್ಮ ಕೋಂ ರಂಗಸ್ವಾಮಿ
ಸುಮಾರು 45 ವರ್ಷ ವಯಸ್ಸು,
ಗೂರನಹಳ್ಳಿ ಗ್ರಾಮ,
ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ.

( ವಾದಿಯರ ಪರ ಶ್ರೀ ಸಂದೀಪ್ ಗೌಡ ., ವಕೀಲರು)

**-ವಿರುದ್ಧ-**

**ಪ್ರತಿವಾದಿಯರುಃ**

1. ದೇವಮ್ಮ ಕೋಂ ಲೇಟ್ ರಂಗೇಗೌಡ, **(ಮೃತಪಟ್ಟಿರುತ್ತಾರೆ)**

2. ಶಿವರಾಜ ಉಃ ಶಿವರಾಜೇಗೌಡ ಪೌತಿಯಾಗಿದ್ದು

**ಇವರ ಕಾನೂನು ಬದ್ಧ ವಾರಸುದಾರರು**

2(ಎ). ಪುಟ್ಟನಂಜಮ್ಮ ಕೋಂ ಲೇಟ್ ಶಿವರಾಜು
ಉಃ ಶಿವರಾಜೇಗೌಡ,
ಸುಮಾರು 58 ವರ್ಷ ವಯಸ್ಸು,

2(ಬಿ) ಮಂಜೇಗೌಡ ಬಿನ್ ಲೇಟ್ ಶಿವರಾಜು ಉಃ
ಶಿವರಾಜೇಗೌಡ
ಸುಮಾರು 36 ವರ್ಷ ವಯಸ್ಸು,

2(ಸಿ)ದಿನೇಶ್ ಬಿನ್ ಲೇಟ್ ಶಿವರಾಜು ಉಃ ಶಿವರಾಜೇಗೌಡ,
ಸುಮಾರು 32 ವರ್ಷ ವಯಸ್ಸು,

3. ಸರೋಜಮ್ಮ ಕೋಂ ಲೇಟ್ ಕೃಷ್ಣೇಗೌಡ,
ಸುಮಾರು 42 ವರ್ಷ ವಯಸ್ಸು,

4. ಕುಮಾರಿ ರಶ್ಮಿ ಬಿನ್ ಲೇಟ್ ಕೃಷ್ಣೇಗೌಡ,
ಸುಮಾರು 22 ವರ್ಷ ವಯಸ್ಸು,

5. ರಂಜಿತ್ ಬಿನ್ ಲೇಟ್ ಕೃಷ್ಣೇಗೌಡ,
ಸುಮಾರು 20 ವರ್ಷ ವಯಸ್ಸು,

6. ದೇವರಾಜೇಗೌಡ ಬಿನ್ ಲೇಟ್ ರಂಗೇಗೌಡ,
ಸುಮಾರು 40 ವರ್ಷ ವಯಸ್ಸು,
1 ರಿಂದ 6 ನೇ ಪ್ರತಿವಾದಿಯರ ವಾಸಃ
ಗೌಡಗೆರೆ ಗ್ರಾಮ, ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು. ಹಾಸನ ಜಿಲ್ಲೆ.

7. ಗೌರಿ ಕೋಂ ಲೇಟ್ ಕೃಷ್ಣೇಗೌಡ,
ಸುಮಾರು 38 ವರ್ಷ ವಯಸ್ಸು,
ಸುಂಡಹಳ್ಳಿ ಗ್ರಾಮ,
ಶ್ರವಣಬೆಳಗೊಳ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ.

( 3 ರಿಂದ 5 ನೇ ಪ್ರತಿವಾದಿಯರು ಮತ್ತು 2(ಎ) ಮತ್ತು 2(ಬಿ) ಪ್ರತಿವಾದಿಯರ ಪರ ಶ್ರೀ ಕೆ.ಎನ್.ಎಸ್ ವಕೀಲರು, 2(ಸಿ) ಪ್ರತಿವಾದಿ ಗೈರು, 1, 2, 6. 7 ನೇ ಪ್ರತಿವಾದಿಯರು ಏಕಪಕ್ಷೀಯರಾಗಿರುತ್ತಾರೆ )

| | | | | |
|---|---|---|---|---|
| 1.ದಾವಾ ದಾಖಲು ಮಾಡಿದ ದಿನಾಂಕ | : | 20-12-2013 | | |
| 2. ದಾವೆಯ ಸ್ವರೂಪ | : | ವಿಭಾಗ ಕೋರಿ | | |
| 3. ಸಾಕ್ಷ್ಯ ಪ್ರಾರಂಭವಾದ ದಿನಾಂಕ | : | 09-03-2015 | | |
| 4. ತೀರ್ಪು ನೀಡಿದ ದಿನಾಂಕ | : | 29-01-2022 | | |
| 5. ಒಟ್ಟು ತೆಗೆದುಕೊಂಡ ಸಮಯ | : | ವರ್ಷ | ತಿಂಗಳು | ದಿನ |
| | | 08 | 01 | 09 |

**(ಶ್ರೀಮತಿ ಲಕ್ಷ್ಮಿ.ಎಂ.ವಿ)**
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

## ತೀರ್ಪು

ವಾದಿಯರು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ಸಲ್ಲಿಸಿ, ದಾವಾ ಸ್ವತ್ತುಗಳಲ್ಲಿ ವಾದಿಯು 2/5 ಭಾಗದ ಪ್ರತ್ಯೇಕ ಹಿಸ್ಸೆ ಮತ್ತು ಸ್ವಾಧೀನ ಕೊಡಿಸಬೇಕೆಂದು ಕೋರಿ ಈ ದಾವೆ ಸಲ್ಲಿಸಿದ್ದಾರೆ.

2. **ವಾದ ಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.**

1 ನೇ ಪ್ರತಿವಾದಿಯು, ವಾದಿಯರ ಹಾಗೂ 2, 6 ಮತ್ತು 7 ನೇ ಪ್ರತಿವಾದಿಯ ಖಾಸಾ

ತಾಯಿಯಾಗಿದ್ದು, 2 ಮತ್ತು 6 ನೇ ಪ್ರತಿವಾದಿಯರು ವಾದಿಯರ ಸಹೋದರರಾಗಿರುತ್ತಾರೆ. 7 ನೇ ಪ್ರತಿವಾದಿ ವಾದಿಯರ ಕಿರಿಯ ಸಹೋದರಿಯಾಗಿರುತ್ತಾಳೆ. 3 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಮಗ ಮೃತ ಕೃಷ್ಣೇಗೌಡನ ಹೆಂಡತಿಯಾಗಿದ್ದು, ವಾದಿಯರ ಅತ್ತಿಗೆಯಾಗಿರುತ್ತಾಳೆ. 4 ಮತ್ತು 5 ನೇ ಪ್ರತಿವಾದಿಯರು 3 ನೇ ಪ್ರತಿವಾದಿಯ ಮಕ್ಕಳಾಗಿರುತ್ತಾರೆ. ವಾದಿಯರು ಹಾಗೂ ಪ್ರತಿವಾದಿ 1 ರಿಂದ 7 ನೇ ಪ್ರತಿವಾದಿಯರ ಮೂಲ ಪುರುಷ ಕೆಂಪೇಗೌಡ ಆಗಿದ್ದು, ಸದರಿ ಮೃತ ಕೆಂಪೇಗೌಡನಿಗೆ 2 ಜನ ಮಕ್ಕಳಿದ್ದು, 1 ನೇ ರಂಗೇಗೌಡ, 2 ನೇ ಬೋರೇಗೌಡ, ವಾದಿಯರು ಹಾಗೂ ಪ್ರತಿವಾದಿಯರು ಪೌತಿ ರಂಗೇಗೌಡನ ಕುಟಂಬಸ್ಥರಾಗಿದ್ದು, ವಾದಿಯರು ಹಾಗೂ ಪ್ರತಿವಾದಿಯರ ನಡುವೆ ಯಾವುದೇ ದಾವಾ ಷೆಡ್ಯೂಲ್ ಸ್ವತ್ತುಗಳ ಸಂಬಂಧ ಯಾವುದೇ ಕಾನೂನುಬದ್ಧ ವಿಭಾಗವಾಗಿರುವುದಿಲ್ಲ. ದಾವಾ ಷೆಡ್ಯೂಲ್ ಸ್ವತ್ತುಗಳ ಜಂಟಿ ಸ್ವಾಧೀನಾನುಭವದಲ್ಲಿರುತ್ತದೆ.

3. ದಾವಾ ಷೆಡ್ಯೂಲ್ ಸ್ವತ್ತುಗಳು ವಾದಿಯರ ತಂದೆ ರಂಗೇಗೌಡ ಮತ್ತು ವಾದಿಯರ ಚಿಕ್ಕಪ್ಪ ಬೋರೇಗೌಡ ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಾಗ ವಾದಿಯ ತಂದೆಯ ಭಾಗಕ್ಕೆ ಬಂದ ಸ್ವತ್ತುಗಳಾಗಿದ್ದು, ವಾದಿಯರ ತಂದೆ ಮೃತ ರಂಗೇಗೌಡ ಪೌತಿಯಾದ ನಂತರ ಪ್ರತಿವಾದಿಯರೆಲ್ಲರೂ ವಾದಿಯರ ಹಿಸ್ಸಾ ಹಕ್ಕಿಗೆ ಮೋಸ ಮಾಡುವ ಉದ್ದೇಶದಿಂದ 1,2 ಮತ್ತು 3 ನೇ ಪ್ರತಿವಾದಿಯ ಗಂಡ ಮೃತ ಕೃಷ್ಣೇಗೌಡ ಹಾಗೂ 6 ನೇ ಪ್ರತಿವಾದಿ ಷರೀಖಾಗಿ ದಾವಾ ಷೆಡ್ಯೂಲ್ ಸ್ವತ್ತುಗಳನ್ನು ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು ತಮ್ಮ ಹೆಸರಿಗೆ ರೆವಿನ್ಯೂ ಅಧಿಕಾರಿಗಳ ಜೊತೆ ಶಾಮೀಲಾಗಿ ಖಾತೆ ಮಾಡಿಸಿಕೊಂಡಿರುತ್ತಾಳೆ.

4. ವಾದಿಯರು ಹಿರಿಯರು ಮತ್ತು ಸಂಬಂಧಿಕರ ಮೂಲಕ ವಾದಿಯರಿಗೆ ಸಲ್ಲಬೇಕಾದ ಹಿಸ್ಸೆಯನ್ನು ನೀಡುವಂತೆ ಕೇಳಿಕೊಂಡಾಗ ಪ್ರತಿವಾದಿಯರು ಈಗಾಗಲೇ ವಿಭಾಗ ಮಾಡಿಕೊಂಡಿರುವುದಾಗಿ ಹಾಗೂ ಯಾವುದೇ ಹಿಸ್ಸೆ ನೀಡುವುದಿಲ್ಲ ಎಂದು ತಿರಸ್ಕಾರ ಮಾಡಿರುತ್ತಾರೆ.

ವಾದಿಯು ದಾವಾ ಸ್ವತ್ತುಗಳಲ್ಲಿ ಸಂಬಂಧಿಸಿದ ದಾಖಲಾತಿಗಳನ್ನು ಪರಿಶೀಲಿಸಲಾಗಿ ಪ್ರತಿವಾದಿಯರ ಹೆಸರಿಗೆ ಖಾತೆ ಇರುವುದು ತಿಳಿದು ಬಂದಿದ್ದು ಅನ್ಯಮಾರ್ಗವಿಲ್ಲದೇ ವಾದಿಯರು ದಾವಾ ಅನುಸೂಚಿ ಸ್ವತ್ತುಗಳಲ್ಲಿ ತಮಗಿರುವ ಭಾಗಾಂಶದ ಪರಿಹಾರವನ್ನು ಕೋರಿ ದಾವೆಯನ್ನು ಸಲ್ಲಿಸಿ ಡಿಕ್ರಿ ಮಾಡಲು ಕೋರಿಕೊಂಡಿದ್ದಾರೆ.

5. ಪ್ರತಿವಾದಿಯರಿಗೆ ನ್ಯಾಯಾಲಯದಿಂದ ದಾವಾ ಸಮನ್ಸ್ ಹೊರಡಿಸಿದ್ದು, ಸಮನ್ಸ್ ಜಾರಿಯಾಗಿದ್ದು, 1, 2, 6 ನೇ ಪ್ರತಿವಾದಿಯರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ದಾವಾ ಪ್ಯಾರದ 2 ನೇ ಖಂಡಿಕೆಯ ಸಂಗತಿಗಳು ನಿಜವಾಗಿದ್ದು, ವಾದಿಯರ ಹಾಗೂ ಪ್ರತಿವಾದಿಯರ ಸಂಬಂಧಗಳು ನಿಜವಾಗಿರುತ್ತದೆ ಎಂದು ಒಪ್ಪಿಕೊಂಡಿರುತ್ತಾರೆ. 1 ನೇ ವಾದಿಯ ಮದುವೆಯು ಈಗ್ಗೆ 35 ವರ್ಷಗಳ ಹಿಂದೆ ಹಾಗೂ 2 ನೇ ವಾದಿಯ ಮದುವೆಯನ್ನು ಈಗ್ಗೆ 33 ವರ್ಷಗಳ ಹಿಂದೆಯೇ ಅವರ ತಂದೆ ರಂಗೇಗೌಡರು ಬದುಕಿರುವಾಗಲೇ ಹೇರಳ ಹಣ ಖರ್ಚು ಮಾಡಿ ಚಿನ್ನಾಭರಣ ಹಾಗೂ ಹಣವನ್ನು ನೀಡಿ ಮದುವೆ ಮಾಡಿಕೊಟ್ಟಿದ್ದು, ಅಂದಿನಿಂದಲೂ ಅವರು ಅವರ ಗಂಡಂದಿರ ಮನೆಯಲ್ಲಿ ವಾಸವಾಗಿದ್ದು, ಅವರುಗಳು ಪ್ರತಿವಾದಿಯರ ಒಟ್ಟು ಕುಟುಂಬದಲ್ಲಿ ವಾಸವಾಗಿರುವುದಿಲ್ಲ ಮತ್ತು ಒಟ್ಟು ಕುಟುಂಬದ ಸದಸ್ಯರಾಗಿರುವುದಿಲ್ಲ. ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ಅವರಿಗೆ ಹಿಸ್ಸಾ ಹಕ್ಕು ಇರುವುದಿಲ್ಲ, 1 ನೇ ವಾದಿಗೆ ಅವರ ಮದುವೆಯಾದ ನಂತರವೂ ಗೌಡಗೆರೆ ಗ್ರಾಮದಲ್ಲಿ ಜಮೀನನ್ನು ಸಹ ಪ್ರತಿವಾದಿಯರು ಕೊಂಡುಕೊಟ್ಟಿರುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತುಗಳನ್ನು ದಿಃ 10-01-1998 ರಂದು 1, 2, 6 ನೇ ಪ್ರತಿವಾದಿ ಹಾಗೂ 3 ನೇ ಪ್ರತಿವಾದಿಯ ಗಂಡ ಪೌತಿ ಕೃಷ್ಣೇಗೌಡರು ಪಂಚಾಯತಿ ಪಾಲುಪಟ್ಟಿಯ ಮೂಲಕ ವಿಭಾಗ ಮಾಡಿಕೊಂಡಿದ್ದು, ಅಂದಿನಿಂದಲೂ ಸದರಿ ಪಾಲುಪಟ್ಟಿಯಂತೆ ಅವರವರ ಹಿಸ್ಸೆಗೆ ಬಂದ ಸ್ವತ್ತುಗಳನ್ನು ಅವರವರೇ ಅನುಭವ ಮಾಡಿಕೊಂಡು ಬರುತ್ತಿರುತ್ತಾರೆ. ವಾದಿಯರಿಗೆ ಅವರ ಮದುವೆಯ ಸಮಯದಲ್ಲಿಯೇ ಹಿಸ್ಸೆಗೆ ಬದಲಾಗಿ ಚಿನ್ನಾಭರಣ

ಹಾಗೂ ಹಣ ನೀಡಿದ್ದರಿಂದ ಅವರಿಗೆ ಯಾವುದೇ ಹಿಸ್ಸೆ ಇರುವುದಿಲ್ಲ. ವಾದಿಯರು ಪ್ರತಿವಾದಿಯರ ಆಗದವರ ಚಿತಾವಣೆ ಮೇರೆಗೆ ಹಾಗೂ ಅಕ್ರಮ ಪಾಯಿದೆ ಹೊಂದುವ ದುರುದ್ದೇಶದಿಂದ ಸದರಿ ದಾವೆಯನ್ನು ಸಲ್ಲಿಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ವಾದಿಯರು ತಂದಿರುವ ದಾವೆಯನ್ನು ಖರ್ಚು ಸಮೇತ ವಜಾ ಮಾಡಬೇಕೆಂದು ಕೋರಿಕೊಂಡಿದ್ದಾರೆ.

6. ವಾದಪತ್ರ ಹಾಗೂ ಪ್ರತಿವಾದ ಪತ್ರದಲ್ಲಿರುವ ಸಂಗತಿಗಳ ಆಧಾರದ ಮೇಲೆ ಹಿಂದಿನ ಪೀಠಾಧಿಕಾರಿಗಳು ಈ ಕೆಳಕಂಡ ವಿವಾದಾಂಶಗಳನ್ನು ರಚಿಸಲಾಗಿದೆ.

## ವಿವಾದಾಂಶಗಳು

**1. ವಾದಿಯರು ಮತ್ತು ಪ್ರತಿವಾದಿಯರು ಒಟ್ಟು ಕುಟುಂಬದ ಸದಸ್ಯರಾಗಿದ್ದು ದಾವಾ ಸ್ವತ್ತುಗಳು ತನ್ನ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಪಿತ್ರಾರ್ಜಿತ ಸ್ವತ್ತುಗಳೆಂದು ರುಜುವಾತುಪಡಿಸುತ್ತಾರೆಯೆ?**

**2. ಪ್ರತಿವಾದಿ 1, 2 ಮತ್ತು 6 ಮತ್ತು 3 ನೇ ಪ್ರತಿವಾದಿಯ ಗಂಡ ಕೃಷ್ಣೇಗೌಡರವರ ನಡುವೆ ದಿಃ 10-01-1998 ರ ಪಾಲುಪಟ್ಟಿ ಮೂಲಕ ಸ್ವತ್ತುಗಳನ್ನು ಹಿಸ್ಸೆ ಮಾಡಿಕೊಂಡಿರುತ್ತಾರೆ ಎಂಬುದನ್ನು ರುಜುವಾತುಪಡಿಸುತ್ತಾರೆಯೇ ?**

**3. ವಾದಿಯರು ದಾವೆಯ ಕೋರಿರುವಂತೆ 2/5 ನೇ ಭಾಗದ ಹಿಸ್ಸೆಯನ್ನು ಪಡೆಯಲು ಅರ್ಹರೇ ?**

**4. ವಾದಿಯರು ಫಸಲು ನಷ್ಟ ಪಡೆಯಲು ಅರ್ಹರೇ ?**

**5. ಯಾವ ಆದೇಶ?**

7. ವಾದಿಯು ತನ್ನ ದಾವೆಯನ್ನು ರುಜುವಾತುಪಡಿಸಲು ತನ್ನನ್ನು ತಾನು ಪಿಡಬ್ಲ್ಯೂ-1 ಎಂದು ನುಡಿ ಸಾಕ್ಷ್ಯ ಮಾಡಿಸಿಕೊಂಡಿರುತ್ತಾರೆ. ದಾಖಲೆಗಳನ್ನು ನಿಶಾನೆ ಪಿ-1 ರಿಂದ 39 ಎಂದು

ಗುರುತಿಸಿಕೊಂಡಿರುತ್ತಾರೆ. ವಾದಿಯ ಪರ ವಿಚಾರಣೆ ಮುಕ್ತಾಯಗೊಳಿಸಿಕೊಂಡಿರುತ್ತಾರೆ.

8. 1, 2, 6 ನೇ ಪ್ರತಿವಾದಿಯರು ತಮ್ಮ ಪರವಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಆದರೆ ತಮ್ಮ ಪರವಾಗಿ ಯಾವುದೇ ನುಡಿಸಾಕ್ಷ್ಯ ಮತ್ತು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

9. ವಾದಿಯರ ಪರ ವಕೀಲರ ಮತ್ತು ಪ್ರತಿವಾದಿಯರ ಪರ ವಕೀಲರ ವಾದವನ್ನು ಆಲಿಸಲಾಗಿದೆ. ಸಮಗ್ರ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿದೆ

10. ಮೇಲ್ಕಂಡ ವಿವಾದಾಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆಃ-

| | | |
|---|---|---|
| 1 ನೇ ವಿವಾದಾಂಶ | : | **ಸಕಾರಾತ್ಮಕವಾಗಿ** |
| 2 ನೇ ವಿವಾದಾಂಶ | : | **ನಕಾರಾತ್ಮಕವಾಗಿ** |
| 3 ನೇ ವಿವಾದಾಂಶ | : | **ಸಕಾರಾತ್ಮಕವಾಗಿ** |
| 4 ನೇ ವಿವಾದಾಂಶ | : | **ನಕಾರಾತ್ಮಕವಾಗಿ** |
| 5 ನೇ ವಿವಾದಾಂಶ | : | ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ |

## -<u>**ಕಾರಣಗಳುಃ**</u>-

11. **<u>ವಿವಾದಾಂಶಃ 1 ಮತ್ತು</u> 3:** ಈ ಎರಡು ವಿವಾದಾಂಶಗಳ ಮೇಲಿನ ಚರ್ಚೆಯು ಒಂದಕ್ಕೊಂದು ಅವಲಂಬಿತವಾಗಿರುವುದರಿಂದ ಮತ್ತು ಪ್ರಕರಣದ ವಸ್ತುಸ್ಥಿತಿಗಳ ಮತ್ತು ವಾಕ್ಯಗಳ ಪುನರಾವರ್ತನೆಯನ್ನು ತಡೆಯುವುದಕ್ಕಾಗಿ ಈ ಎರಡೂ ವಿವಾದಾಂಶಗಳನ್ನು ಏಕಕಾಲದಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

12. ವಾದಿಯರು ದಾವಾಸ್ತಿಗಳು ತಮ್ಮ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಸ್ವತ್ತುಗಳಾಗಿರುತ್ತವೆ ಎಂದು ಮತ್ತು ತಾವು ಮತ್ತು ಪ್ರತಿವಾದಿಯರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರೆಂದು ರುಜುವಾತುಪಡಿಸುವ ಭಾರ ವಾದಿಯರ ಮೇಲಿರುತ್ತದೆ.

13. ವಾದಿ/ಪಿ.ಡಬ್ಲ್ಯೂ-1 ತನ್ನ ದಾವೆಯಲ್ಲಿ ಹಾಗೂ ಸಾಕ್ಷಿಯಲ್ಲಿ ಪ್ರತಿವಾದಿಯರ ವಿರುದ್ಧ ಪ್ರತ್ಯೇಕ ಹಿಸ್ಸೆ ಮತ್ತು ಸ್ವಾಧೀನ ಕೋರಿ ಈ ದಾವಾ ತಂದಿರುತ್ತಾರೆ. 1 ನೇ ಪ್ರತಿವಾದಿಯು ವಾದಿಯ ಹಾಗೂ 2, 6, 7 ನೇ ಪ್ರತಿವಾದಿಯರ ತಾಯಿಯಾಗಿರುತ್ತಾರೆ. 2 ಮತ್ತು 6 ನೇ ಪ್ರತಿವಾದಿಯರು ವಾದಿಯರ ಸಹೋದರಿಯರಾಗಿರುತ್ತಾರೆ. 7 ನೇ ಪ್ರತಿವಾದಿ ವಾದಿಯರ ಕಿರಿಯ ಸಹೋದರಿಯರಾಗಿರುತ್ತಾರೆ. 3 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಮಗ ಮೃತ ಕೃಷ್ಣೇಗೌಡನ ಹೆಂಡತಿಯಾಗಿರುತ್ತಾರೆ. ಪ್ರತಿವಾದಿ 4 ಮತ್ತು 5 ರವರು 3 ನೇ ಪ್ರತಿವಾದಿಯ ಮಕ್ಕಳಾಗಿರುತ್ತಾರೆ.

14. ದಾವಾ ಅನುಸೂಚಿ ಸ್ವತ್ತುಗಳು ವಾದಿ ಮತ್ತು ಪ್ರತಿವಾದಿಯರ ಹಿಂದೂ ಅವಿಭಕ್ತ ಕುಟುಂಬದ ಪಿತ್ರಾರ್ಜಿತ ಸ್ವತ್ತುಗಳಾಗಿರುತ್ತದೆ. ದಾವಾ ಸ್ವತ್ತುಗಳು ವಾದಿಯರ ತಂದೆ ಪ್ರತಿವಾದಿ 2, 3 ಮತ್ತು 6 ರವರ ಹೆಸರಿನಲ್ಲಿರುತ್ತದೆ .

15. ವಾದಿಯರು ಮತ್ತು ಪ್ರತಿವಾದಿಯರು ವಿಭಾಗವಾಗಿರುವುದಿಲ್ಲ. ವಾದಿಯರು ತಮಗೆ ಬರಬೇಕಾದ 2/5 ನೇ ಭಾಗದ ಹಿಸ್ಸೆಯನ್ನು ಕೊಡುವಂತೆ ಪ್ರತಿವಾದಿಯರನ್ನು ಕೋರಲಾಗಿ ಪ್ರತಿವಾದಿಯರು ಸದರಿ ಕೋರಿಕೆಯನ್ನು ತಿರಸ್ಕರಿಸಿರುತ್ತಾರೆ ಎಂದು ಹೇಳಿರುತ್ತಾರೆ.

16. ಪಿ.ಡಬ್ಲ್ಯೂ-1 ರವರು ತಮ್ಮ ಸಾಕ್ಷ್ಯದಲ್ಲಿ ದಾವಾ ಸ್ವತ್ತುಗಳು ವಾದಿಯರು ಮತ್ತು ಪ್ರತಿವಾದಿಯರ ಹಿಂದೂ ಅವಿಭಕ್ತ ಕುಟುಂಬದ ಸ್ವತ್ತಾಗಿರುತ್ತದೆ. ಸದರಿ ಸ್ವತ್ತುಗಳು ವಾದಿಯ ತಂದೆ ರಂಗೇಗೌಡ ಮತ್ತು

ಪ್ರತಿವಾದಿ 2, 3, 6 ರವರ ಹೆಸರಿನಲ್ಲಿ ಖಾತೆಯಿರುತ್ತದೆ. ದಾವಾ ಸ್ವತ್ತುಗಳು ಪ್ರತಿವಾದಿಯರ ಸ್ವಾಧೀನದಲ್ಲಿರುತ್ತದೆ. ವಾದಿಯರು ಮತ್ತು ಪ್ರತಿವಾದಿಯರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು, ಯಾವುದೇ ವಿಭಾಗವಾಗಿರುವುದಿಲ್ಲ. ವಾದಿಯರಿಗೆ ದಾವಾ ಸ್ವತ್ತಿನಲ್ಲಿ 2/5 ನೇ ಭಾಗದ ಹಿಸ್ಸಾ ಹಕ್ಕು ಇದ್ದು ವಾದಿಯರು ಪ್ರತಿವಾದಿಯರನ್ನು ಹಿಸ್ಸೆ ಕೇಳಿದರೂ ಸಹ ಪ್ರತಿವಾದಿಯರು ವಾದಿಗೆ ಹಿಸ್ಸೆ ನೀಡಿರುವುದಿಲ್ಲ ಎಂದು ನುಡಿದಿರುತ್ತಾರೆ.

17. ಪಿ.ಡಬ್ಲ್ಯೂ-1 ರವರನ್ನು ಪ್ರತಿವಾದಿಯರ ಪರವಾಗಿ ಪಾಟೀಸವಾಲು ಮಾಡಿದಾಗ ಪಿ.ಡಬ್ಲ್ಯೂ-1 ರವರ ಮೌಖಿಕ ಸಾಕ್ಷ್ಯವನ್ನು ಖಂಡನಾರ್ಹ ಮಾಡುವ ಅಂಶಗಳು ಇರದ ಹೊರತು ಪಿ.ಡಬ್ಲ್ಯೂ-1 ರವರ ಸಾಕ್ಷ್ಯವು ವಾದಿಯರ ದಾವೆಗೆ ಪೂರಕವಾಗಿರುತ್ತದೆ ಎಂದು ನಾನು ಅಭಿಪ್ರಾಯಪಡುತ್ತೇನೆ.

18. 1, 2, 6, ನೇ ಪ್ರತಿವಾದಿಯರು ತಮ್ಮ ಲಿಖಿತ ಹೇಳಿಕೆಯಲ್ಲಿ ದಾವಾ ಸ್ವತ್ತುಗಳನ್ನು ದಿಃ 10-01-1998 ರಂದು ಪ್ರತಿವಾದಿ 1, 2. 6 ಮತ್ತು 3 ನೇ ಪ್ರತಿವಾದಿಯ ಗಂಡ ಪೌತಿ ಕೃಷ್ಣೇಗೌಡರವರು ಪಂಚಾಯತಿ ಪಾಲುಪಟ್ಟಿಯ ಮೂಲಕ ವಿಭಾಗ ಮಾಡಿಕೊಂಡಿದ್ದು, ಅವರ ಹಿಸ್ಸೆಗೆ ಬಂದ ಸ್ವತ್ತುಗಳನ್ನು ಅವರವರೇ ಅನುಭವ ಮಾಡಿಕೊಂಡು ಹಕ್ಕುದಾರರಾಗಿರುತ್ತಾರೆ. ವಾದಿಯರಿಗೆ ಅವರ ಹಿಸ್ಸೆಗೆ ಬದಲಾಗಿ ಮದುವೆ ಕಾಲದಲ್ಲಿ ಚಿನ್ನಾಭರಣ ಹಾಗೂ ಹಣ ನೀಡಿರುವುದರಿಂದ ಅವರಿಗೆ ಯಾವುದೇ ಹಿಸ್ಸೆ ಇರುವುದಿಲ್ಲ ಎಂದು ಹೇಳಿರುತ್ತಾರೆ. ಆದರೆ ವಾದಿಯರ ಮತ್ತು ಪ್ರತಿವಾದಿಯರ ಸಂಬಂಧವನ್ನು ವಿವಾದ ಮಾಡಿರುವುದಿಲ್ಲ. ವಾದಿಯರು ಮತ್ತು ಪ್ರತಿವಾದಿಯರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು, ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳಾಗಿರುತ್ತದೆ ಎಂಬುದನ್ನು ಒಪ್ಪಿಕೊಂಡಿರುವುದಿಲ್ಲ.

19. ವಾದಿಯು ಹಾಜರುಪಡಿಸಿರುವ ನಿಶಾನೆ ಪಿ-1 ಮತ್ತು 2 ಪಹಣಿಯಾಗಿದ್ದು, ದಾವಾ ಐಟಂ ನಂ. 2 ಪ್ರತಿವಾದಿ 2, 6, 3 ರವರ ಹೆಸರಿನಲ್ಲಿರುತ್ತದೆ. ನಿಪಿ-3 ಪಹಣಿಯಾಗಿದ್ದು, ದಾವಾ ಐಟಂ ನಂ. 4 ಪ್ರತಿವಾದಿ 2

ಮತ್ತು 3 ರವರ ಹೆಸರಿನಲ್ಲಿರುತ್ತದೆ. ನಿಪಿ-4 ಪಹಣಿಯಾಗಿದ್ದು, ದಾವಾ ಐಟಂ ನಂ. 5 ವಾದಿಯ ತಂದೆಯ ಹೆಸರಿನಲ್ಲಿರುತ್ತದೆ. ನಿಪಿ-5 ರಿಂದ 7 ಎಂ.ಆರ್. ಅಗಿದ್ದು ದಾವಾ ಸ್ವತ್ತುಗಳು ಪ್ರತಿವಾದಿ 2, 3 ಮತ್ತು 6 ರವರ ಹೆಸರಿಗೆ ಖಾತೆಯಾಗಿರುತ್ತದೆ. ನಿಪಿ-8 ವಾದಿಯರು ಮತ್ತು ಪ್ರತಿವಾದಿಯರ ವಂಶವೃಕ್ಷವಾಗಿರುತ್ತದೆ. ನಿಪಿ-9, ಪಹಣಿಯಾಗಿದ್ದು ದಾವಾ ಐಟಂ ನಂ. 1 ಪ್ರತಿವಾದಿ 2, 3, 6 ರವರ ಹೆಸರಿನಲ್ಲಿರುತ್ತದೆ. ನಿಪಿ-10 ಪಹಣಿಯಾಗಿದ್ದು ದಾವಾ ಐಟಂ ನಂ. 1 ಪ್ರತಿವಾದಿ 2, 6 ಮತ್ತು 3 ನೇ ಪ್ರತಿವಾದಿಯ ಗಂಡ ಕೃಷ್ಣೇಗೌಡರ ಹೆಸರಿನಲ್ಲಿರುತ್ತದೆ. ನಿಪಿ-11 ಪಹಣಿಯಾಗಿದ್ದು ದಾವಾ ಐಟಂ ನಂ. 2 ಪ್ರತಿವಾದಿ 2,6, ಮತ್ತು 3 ನೇ ಪ್ರತಿವಾದಿಯ ಗಂಡ ಕೃಷ್ಣೇಗೌಡರ ಹೆಸರಿನಲ್ಲಿರುತ್ತದೆ. ನಿಪಿ-12 ಪಹಣಿಯಾಗಿದ್ದು ದಾವಾ ಐಟಂ ನಂ. 3 ಪ್ರತಿವಾದಿ 2, 3, 6 ರವರ ಹೆಸರಿನಲ್ಲಿರುತ್ತದೆ. ನಿಪಿ-13 ಪಹಣಿಯಾಗಿದ್ದು ದಾವಾ ಐಟಂ ನಂ. 4 ಪ್ರತಿವಾದಿ 2 ಮತ್ತು 3 ನೇ ಪ್ರತಿವಾದಿಯ ಗಂಡ ಕೃಷ್ಣೇಗೌಡರ ಹೆಸರಿನಲ್ಲಿರುತ್ತದೆ.

20. ನಿಪಿ-14 ರಿಂದ 18, 20 ರಿಂದ 27 ಪಹಣಿಗಳಾಗಿದ್ದು, ದಾವಾ ಐಟಂ ನಂ. 2, 3, 4 ಸ್ವತ್ತುಗಳು ವಾದಿಯ ತಂದೆ ರಂಗೇಗೌಡನ ಹೆಸರಿನಲ್ಲಿರುತ್ತದೆ. ನಿಪಿ-19 ಪಹಣಿಯಾಗಿದ್ದು ದಾವಾ ಐಟಂ ನಂ. 3 ಪ್ರತಿವಾದಿ 2, 3, 6 ರವರ ಹೆಸರಿನಲ್ಲಿರುತ್ತದೆ. ನಿಪಿ-28 ರಿಂದ 37 ಹಿಡುವಳಿ ಪತ್ರಗಳಾಗಿದ್ದು, ದಾವಾ ಸ್ವತ್ತು ವಾದಿಯ ತಂದೆ ರಂಗೇಗೌಡನ ಹೆಸರಿನಲ್ಲಿರುತ್ತದೆ. ನಿಪಿ-38 ಎಂ.ಆರ್ ಆಗಿದ್ದು, ದಾವಾ ಸ್ವತ್ತು ಪ್ರತಿವಾದಿ 2, 3, 6 ರವರ ಹೆಸರಿಗೆ ಖಾತೆಯಾಗಿರುವುದು ಕಂಡು ಬರುತ್ತದೆ. ನಿಪಿ-39 ವಾದಿಯ ತಂದೆಯ ಮರಣ ಪ್ರಮಾಣ ಪತ್ರವಾಗಿರುತ್ತದೆ

21. ಈ ಪ್ರಕರಣದಲ್ಲಿ 1,2,6 ನೇ ಪ್ರತಿವಾದಿಯರು ತಮ್ಮ ಲಿಖಿತ ಹೇಳಿಕೆಯಲ್ಲಿ ಹೇಳಿದಂತೆ ತಮ್ಮ ಪ್ರತಿರಕ್ಷಣೆಗೆ ತಮ್ಮ ಪರ ಯಾವುದೇ ಸಾಕ್ಷಿ ವಿಚಾರಣೆಯನ್ನು ಮಾಡಿಸಿಕೊಂಡಿರುವುದಿಲ್ಲ ಮತ್ತು ಯಾವುದೇ ದಸ್ತವೇಜೀಯ ಸಾಕ್ಷ್ಯವನ್ನು ಒದಗಿಸಿರುವುದಿಲ್ಲ. ದಾವಾಸ್ತಿಗಳ ಖಾತೆ ವಾದಿಯ ತಂದೆ ರಂಗೇಗೌಡ ಮತ್ತು ಪ್ರತಿವಾದಿ 2,3,6 ರವರ ಹೆಸರಿಗೆ ಇರುವುದು ವಾದಿಯರು ಹಾಜರುಪಡಿಸಿರುವ ನಿಪಿ-

1 ರಿಂದ 38 ದಾಖಲೆಗಳ ಮೂಲಕ ಸ್ಪಷ್ಟವಾಗಿರುತ್ತದೆ. ವಾದಿಯ ತಂದೆ ರಂಗೇಗೌಡ ಮೃತ ಪಟ್ಟಿರುವ ಸಂಗತಿ ನಿರ್ವಿವಾದವಾಗಿರುತ್ತದೆ. ವಾದಿಯರ ತಂದೆ ಮೃತ ಪಟ್ಟ ನಂತರ ದಾವಾಸ್ತಿಗಳು ವಾದಿಯರು ಮತ್ತು ಪ್ರತಿವಾದಿಯರಿಗೆ ಸಮಾನವಾಗಿ ಹಂಚಿಕೆಯಾಗಬೇಕಾಗಿರುತ್ತದೆ.

22. ದಾವಾಸ್ತಿಗಳು ವಾದಿಯರು ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿಗಳೆಂದು ವಾದಿಯರು ತಮ್ಮ ವಾದ ಪತ್ರದಲ್ಲಿ ತಿಳಿಸಿರುವಂತೆ ದಾವಾಸ್ತಿಗಳು ವಾದಿಯರು ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿಗಳಾಗಿರುತ್ತದೆ. ಇದರಿಂದ ವಾದಿಯರು ಮತ್ತು ಪ್ರತಿವಾದಿಯರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರೆಂದು ರುಜುವಾತಾಗಿರುತ್ತದೆ.

23. ವಾದಿಯರು ತಮ್ಮ ಸಾಕ್ಷ್ಯದಲ್ಲಿ ದಾವಾಸ್ತಿಗಳು ತಮ್ಮ ಹಾಗೂ ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿಗಳಾಗಿರುತ್ತವೆ. ದಾವಾಸ್ತಿಗಳಲ್ಲಿ ವಾದಿಯರಿಗೆ 2/5 ನೇ ಭಾಗ ಹಿಸ್ಸೆ ಇರುತ್ತದೆಂದು, ಅದನ್ನು ವಿಭಾಗ ಮಾಡಿ ಪ್ರತ್ಯೇಕ ಸ್ವಾಧೀನತೆಯನ್ನು ಕೊಡಲು ಪ್ರತಿವಾದಿಯರಿಗೆ ಕೇಳಿಕೊಂಡಿದ್ದರೂ, ಪ್ರತಿವಾದಿಯರು ದಾವಾ ಸ್ವತ್ತುಗಳಲ್ಲಿ ಹಿಸ್ಸೆಯನ್ನು ನೀಡಲು ನಿರಾಕರಿಸಿರುತ್ತಾರೆ ಎಂದು ಹೇಳಿರುತ್ತಾರೆ. ವಾದಿಯರು ಹಾಜರುಪಡಿಸಿರುವ ನಿಶಾನೆ ಪಿ-1 ರಿಂದ 38 ದಾಖಲೆಗಳು ವಾದಿಯರ ತಂದೆ ಮೃತ ರಂಗೇಗೌಡ ಮತ್ತು ಪ್ರತಿವಾದಿ 2,3,6 ರವರ ಹೆಸರಿಗೆ ಖಾತೆಯಿದ್ದು, ವಾದಿಯರ ತಂದೆ ಮರಣ ಹೊಂದಿರುವುದರಿಂದ ವಾದಿಯರು ಮತ್ತು ಪ್ರತಿವಾದಿಯರು ದಾವಾಸ್ತಿಗಳಲ್ಲಿ ಸಮಾನ ಹಿಸ್ಸಾ ಹಕ್ಕು ಹೊಂದಿರುತ್ತಾರೆ.

24. ವಾದಿ ಪರ ವಕೀಲರು 1 ನೇ ಪ್ರತಿವಾದಿಯು ಮೃತಪಟ್ಟಿರುತ್ತಾರೆ ಎಂದು ಮೆಮೋ ಸಲ್ಲಿಸಿರುತ್ತಾರೆ. 1 ನೇ ಪ್ರತಿವಾದಿಯರ ವಾರಸುದಾರರು ವಾದಿಯರು ಮತ್ತು ಪ್ರತಿವಾದಿ 2,6,7 ರವರು ಕಡತದ ಮೇಲಿರುತ್ತಾರೆ. ಆದ್ದರಿಂದ ವಾದಿಯರು ದಾವಾಸ್ತಿಗಳಲ್ಲಿ 2/4 ನೇ ಭಾಗ ಹಿಸ್ಸೆ ಪಡೆಯಲು ಅರ್ಹರಿರುತ್ತಾರೆಂದು ಅಭಿಪ್ರಾಯಪಟ್ಟು ಈ ವಿವಾದಾಂಶ 1 ಮತ್ತು 3 ನ್ನು **ಸಕಾರಾತ್ಮಕವಾಗಿ** ಉತ್ತರಿಸಲಾಗಿದೆ.

**25. <u>ವಿವಾದಾಂಶ</u> 2:** ಪ್ರತಿವಾದಿಯರು ತಮ್ಮ ಲಿಖಿತ ಹೇಳಿಕೆಯಲ್ಲಿ 1 ನೇ ವಾದಿಯು 35 ವರ್ಷಗಳ ಹಿಂದೆ ಹಾಗೂ 2 ನೇ ವಾದಿಯು 33 ವರ್ಷಗಳ ಹಿಂದೆ ಅವರ ತಂದೆ ರಂಗೇಗೌಡ ಬದುಕಿರುವಾಗಲೇ ಹೇರಳ ಹಣ ಖರ್ಚು ಮಾಡಿ ಚಿನ್ನಾಭರಣ ನೀಡಿ ಮದುವೆ ಮಾಡಿ ಕೊಟ್ಟಿರುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ವಾದಿಯರಿಗೆ ಹಿಸ್ಸಾ ಹಕ್ಕು ಇರುವುದಿಲ್ಲ. ದಾವಾ ಷೆಡ್ಯೂಲ್ ಸ್ವತ್ತುಗಳನ್ನು ದಿಃ 10-01-1998 ರಂದು ಪ್ರತಿವಾದಿ 1, 2,6 ಮತ್ತು 3 ನೇ ಪ್ರತಿವಾದಿಯ ಗಂಡ ಕೃಷ್ಣೇಗೌಡರವರು ಪಂಚಾಯತಿ ಪಾಲು ಪಟ್ಟಿಯ ಮೂಲಕ ವಿಭಾಗ ಮಾಡಿಕೊಂಡಿದ್ದು, ಪಾಲುಪಟ್ಟಿಯಂತೆ ಅವರ ಹಿಸ್ಸೆಗೆ ಬಂದ ಸ್ವತ್ತುಗಳನ್ನು ಅವರವರೇ ಹಕ್ಕುದಾರರಾಗಿ ಸ್ವಾಧೀನದಲ್ಲಿರುತ್ತಾರೆ ಎಂದು ತಿಳಿಸಿರುತ್ತಾರೆ. ಈ ಪ್ರಕರಣದಲ್ಲಿ 1, 2, 6 ನೇ ಪ್ರತಿವಾದಿಯರು ತಮ್ಮ ಲಿಖಿತ ಹೇಳಿಕೆಯಲ್ಲಿ ಹೇಳಿದಂತೆ ತಮ್ಮ ಪ್ರತಿರಕ್ಷಣೆಗೆ ತಮ್ಮ ಪರ ಯಾವುದೇ ಸಾಕ್ಷಿ ವಿಚಾರಣೆಯನ್ನು ಮಾಡಿಸಿಕೊಂಡಿರುವುದಿಲ್ಲ ಮತ್ತು ಯಾವುದೇ ದಸ್ತವೇಜೀಯ ಸಾಕ್ಷ್ಯವನ್ನು ಒದಗಿಸಿರುವುದಿಲ್ಲ. ಆದ್ದರಿಂದ ವಿವಾದಾಂಶ 2 ನ್ನು **ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

**26. <u>ವಿವಾದಾಂಶಃ</u> 4** ವಾದಿಯರು ಫಸಲು ನಷ್ಟವನ್ನು ಡಿಕ್ರಿ ಪ್ರಕ್ರಿಯೆಯಲ್ಲಿ ರುಜುವಾತುಪಡಿಸಿಕೊಂಡು ಪರಿಹಾರ ಹೊಂದಲು ಅರ್ಹರಾಗಿರುತ್ತಾರೆ. ಆದ್ದರಿಂದ ವಿವಾದಾಂಶ 4 ನ್ನು **<u>ನಕಾರಾತ್ಮಕವಾಗಿ</u>** ಉತ್ತರಿಸಿದ್ದೇನೆ.

27. **<u>ವಿವಾದಾಂಶಃ</u> 5** ಈ ಮೇಲಿನ ವಿವಾದಾಂಶಗಳಲ್ಲಿ ಹೇಳಲಾದ ಕಾರಣಗಳಿಂದ ಮತ್ತು ಅವುಗಳಿಗೆ ನೀಡಲಾದ ಉತ್ತರಗಳಿಂದ ಈ ಕೆಳಕಂಡಂತೆ ಆದೇಶಿಸಲಾಗಿದೆ.

## -<u>ಆದೇಶಃ</u>

***ವಾದಿಯರ ದಾವೆಯನ್ನು ಡಿಕ್ರಿ ಮಾಡಲಾಗಿದೆ.***

***ದಾವಾ ಸ್ವತ್ತುಗಳಲ್ಲಿ ವಾದಿಯರು ಮತ್ತು 2, 3, 6, 7 ನೇ ಪ್ರತಿವಾದಿಯರು 2/4 ನೇ ಭಾಗದ ಹಿಸ್ಸಾ ಹಕ್ಕನ್ನು ಹೊಂದಿರುತ್ತಾರೆ.***

***ಈ ಮೇಲಿನ ಆದೇಶದಂತೆ ಪ್ರಾಥಮಿಕ ಡಿಕ್ರಿ ಬರೆಯುವುದು.***

(ಈ ತೀರ್ಪನ್ನು ಶೀರ್ಘ್ರಲಿಪಿಗಾರ್ತಿಗೆ ಉಕ್ತಲೇಖನವನ್ನು ಕೊಟ್ಟು, ಅವರ ಗಣಕ ಯಂತ್ರದ ಮೇಲೆ ಬೆರಳಚ್ಚು ಮಾಡಿದ ನಂತರ ತಪ್ಪಿದ್ದಲ್ಲಿ ತಿದ್ದಿ, ಇಂದು ದಿನಾಂಕ 29 ನೇ ಜನವರಿ 2022 ರಂದು ಈ ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

**(ಶ್ರೀಮತಿ ಲಕ್ಷ್ಮಿ.ಎಂ.ವಿ)**
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

-: **ಅನುಬಂಧ** : -

1. ವಾದಿಯ ಪರ ವಿಚಾರಿಸಲಾದ ಸಾಕ್ಷಿಗಳುಃ

| | | |
|---|---|---|
| ಪಿ.ಡಬ್ಲ್ಯೂ-1 | : | ರಂಗಮ್ಮ |

2. ವಾದಿಯ ಪರ ಗುರುತಿಸಲಾದ ದಾಖಲೆಗಳುಃ

| | | |
|---|---|---|
| ನಿಶಾನೆ ಪಿ-1 ರಿಂದ 4 | : | ಪಹಣಿಗಳು |
| ನಿಶಾನೆ ಪಿ-5 ರಿಂದ 7 | : | ಎಂ.ಆರ್. |
| ನಿಶಾನೆ ಪಿ-8 | : | ವಂಶವೃಕ್ಷ |
| ನಿಶಾನೆ ಪಿ-9 ರಿಂದ 27 | : | ಪಹಣಿಗಳು |
| ನಿಶಾನೆ ಪಿ-28 ರಿಂದ 37 | : | ಹಿಡುವಳಿ ಪತ್ರ |
| ನಿಶಾನೆ ಪಿ-38 | : | ಎಂ.ಆರ್ . |
| ನಿಶಾನೆ ಪಿ-39 | : | ಮರಣ ಪ್ರಮಾಣ ಪತ್ರ |

3. ಪ್ರತಿವಾದಿಯರ ಪರ ವಿಚಾರಿಸಲಾದ ಸಾಕ್ಷಿಗಳುಃ

-ಯಾರೂ ಇಲ್ಲ-

4. <u>ಪ್ರತಿವಾದಿಯರ  ಪರವಾಗಿ ಹಾಜರು ಪಡಿಸಿದ ದಾಖಲೆಗಳುঃ</u>

-ಇಲ್ಲ-

**(ಶ್ರೀಮತಿ ಲಕ್ಷ್ಮಿ.ಎಂ.ವಿ)**
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.